# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 732 (739) |
| **ಸದಸ್ಯರ ಹೆಸರು** | : | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | : | 16/12/2024 |
| **ಉತ್ತರಿಸುವ ಸಚಿವರು** | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಶಾಲಾ ಶಿಕ್ಷಣ ಸಾಕ್ಷರತಾ ಇಲಾಖೆಯಲ್ಲಿ ಸಮಗ್ರವಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನುತಿದ್ದುಪಡಿ ಮಾಡುವ ಕುರಿತು 2018 ರಿಂದ ಇಲ್ಲಿಯವರೆಗೆ ಕ್ರಮ ಕೈಗೊಳ್ಳದೇ ಇರಲು ಕಾರಣವೇನು; ಹಾಗಿದ್ದಲ್ಲಿ, ಸದರಿ ನಿಯಮಗಳನ್ನು ಅಂತಿಮಗೊಳಿಸುವ ಕುರಿತು ಸರ್ಕಾರ ಕಾಲಮಿತಿಯೇನಾದರೂ ವಿಧಿಸಿದೆಯೇ; ಯಾವ ಕಾಲಮಿತಿಯೊಳಗಾಗಿ ಅಂತಿಮಗೊಳಿಸಲಾಗುವುದು; ಕಳೆದ ಆರು ವರ್ಷಗಳಿಂದ ಅಂತಿಮಗೊಳಿಸದೇ ಇರಲು ಕಾರಣಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಣೆ ಮಾಡುವ ಬಗ್ಗೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರು ದಿನಾಂಕ:30/05/2018ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.<br><br>ಈ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 97 ಎಸ್‌ಆರ್‌ಡಿ 2004, ದಿನಾಂಕ:08/10/2004, ಸಿಆಸುಇ 82 ಸೇನಿಡಿ 2006 ದಿನಾಂಕ:13/07/2007 ಮತ್ತು ಸುತ್ತೋಲೆ ಸಂಖ್ಯೆ:ಸಿಆಸುಇ 124 ಸೇನಿಡಿ 2012 ದಿನಾಂಕ:10/08/2012ರನ್ವಯ ಸಿಆಸು ಇಲಾಖೆ, ಆರ್ಥಿಕ ಇಲಾಖೆ ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಗಳ ಅಭಿಪ್ರಾಯ ಪಡೆಯಲಾಗಿದ್ದು, ಸದರಿ ಇಲಾಖೆಗಳು ನೀಡಿರುವ ಅಭಿಪ್ರಾಯಗಳನ್ನು ಅನುಕ್ರಮವಾಗಿ **ಅನುಬಂಧ-1**, **ಅನುಬಂಧ-2** ಮತ್ತು **ಅನುಬಂಧ-3**ರಲ್ಲಿ ನೀಡಲಾಗಿದೆ.<br><br>ಸದರಿ ಇಲಾಖೆಗಳು ನೀಡಿರುವ ಅವಲೋಕನೆಗಳ ಹಿನ್ನೆಲೆಯಲ್ಲಿ ದಿನಾಂಕ:24/05/2018, 17/06/2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಮತ್ತು ದಿನಾಂಕ:23/10/2018ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿರುತ್ತದೆ. ಸಭೆಯ ನಡವಳಿಗಳನ್ನು **ಅನುಬಂಧ-4, 5 ಮತ್ತು 6ರಲ್ಲಿ** ಒದಗಿಸಿದೆ.<br><br>ಆದರೆ, ಮೇಲಿನಂತೆ ಆಯುಕ್ತರು ಸಲ್ಲಿಸಿದ್ದ ಸದರಿ ಪ್ರಸ್ತಾವನೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯಲ್ಲಿನ ಕೆಲವು ಹುದ್ದೆಗಳ ನೇಮಕಾತಿ ವಿಧಾನ ಮತ್ತು ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯಲ್ಲಿ ಸ್ಪಷ್ಟತೆ ಹಾಗೂ ನಿಖರತೆ ಇಲ್ಲದೇ ಇರುವುದರಿಂದ ಸದರಿ ನ್ಯೂನತೆಗಳನ್ನು ಸರಿಪಡಿಸಿ ಸಮಗ್ರವಾಗಿ ಪರಿಷ್ಕರಿಸಿದ ಪ್ರಸ್ತಾವನೆಯನ್ನು |
| ಆ) | ಸದರಿ ನಿಯಮಗಳನ್ನು ತಿದ್ದುಪಡಿ ಮಾಡಲು ಆರು ವರ್ಷಗಳ ಸಮಯ ಅವಶ್ಯಕತೆ; ಹಾಗಿದ್ದಲ್ಲಿ, ತಿದ್ದುಪಡಿ ಮಾಡಲು ಇನ್ನು ಎಷ್ಟು ವರ್ಷಗಳು ಬೇಕಾಗಬಹುದು; ಈ ಕುರಿತು ಕಳೆದ ಆರು ವರ್ಷಗಳಿಂದ ನಡೆಸಿರುವ ಸಭೆಯ ನಡವಳಿಗಳು, ಸಂಬಂಧಪಟ್ಟ ಇಲಾಖೆ | |

| | | |
|---|---|---|
| | ನೀಡಿರುವ ಅಭಿಪ್ರಾಯಗಳು ಹಾಗೂ ಶಿಕ್ಷಣ ಇಲಾಖೆಯು ನೀಡಿರುವ ಸಮರ್ಥನೆಗಳ ಸಂಪೂರ್ಣ ಪ್ರತಿಗಳನ್ನು ನೀಡುವುದು | ಸಲ್ಲಿಸುವಂತೆ ಆಯುಕ್ತರನ್ನು ಕೋರಲಾಗಿತ್ತು. ಅದರಂತೆ ದಿನಾಂಕ:18/04/2022ರಂದು 31 ವೃಂದಗಳಿಗೆ ಸಂಬಂಧಿಸಿದಂತೆ ನಂತರ ದಿನಾಂಕ:05/09/2022 ರಂದು ಸಮಗ್ರವಾಗಿ ಒಟ್ಟು 73 ವೃಂದಗಳಿಗೆ ಸಂಬಂಧಿಸಿದ ಪರಿಷ್ಕೃತ ಪ್ರಸ್ತಾವನೆಯನ್ನು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.<br><br>ಅದರಂತೆ, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಆರ್ಥಿಕ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗಳ ಅಭಿಪ್ರಾಯ ಪಡೆಯಲಾಗಿರುತ್ತದೆ. ಸದರಿ ಇಲಾಖೆಗಳು ನೀಡಿರುವ ಅಭಿಪ್ರಾಯಗಳನ್ನು ಅನುಕ್ರಮವಾಗಿ **ಅನುಬಂಧ-7, ಅನುಬಂಧ-8 ಮತ್ತು ಅನುಬಂಧ-9ರಲ್ಲಿ** ಒದಗಿಸಲಾಗಿದೆ.<br><br>ಮೇಲ್ಕಂಡ ಇಲಾಖೆಗಳು ನೀಡಿರುವ ಅಭಿಪ್ರಾಯ / ಅವಲೋಕನೆಗಳ ಹಿನ್ನಲೆಯಲ್ಲಿ, ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆಯ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:03/10/2024ರಂದು ವೃಂದ ಪರಿಶೀಲನಾ ಸಮಿತಿಯ ಉಪ ಸಮಿತಿ ಸಭೆ (Sub Committee of the cadre review Committee) ನಡೆದಿರುತ್ತದೆ. ಸದರಿ ಸಭೆಯ ನಡವಳಿಗಳನ್ನು **ಅನುಬಂಧ-10ರಲ್ಲಿ** ಒದಗಿಸಿದೆ<br><br>ಸದರಿ ಸಭೆಯಲ್ಲಿ ನಿರ್ಣಯಿಸಿದಂತೆ ಸಿಆಸು ಇಲಾಖೆ ಮತ್ತು ಆರ್ಥಿಕ ಇಲಾಖೆಗಳ ಅಭಿಪ್ರಾಯ ಸ್ವೀಕೃತವಾದ ನಂತರ ಕರಡು ನಿಯಮಗಳನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯಿಂದ ಪರಿಶೋಧಿಸಿಕೊಂಡು ಪ್ರಸ್ತಾವನೆಯನ್ನು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ವೃಂದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆದು, ಸಚಿವ ಸಂಪುಟದ ಅನುಮೋದನೆಯೊಂದಿಗೆ ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸಲು ಕ್ರಮವಹಿಸಲಾಗುವುದು. |
| ಇ) | ದಿನಾಂಕ:03/10/2024ರಂದು ಈ ಕುರಿತು ವೃಂದ ಪರಿಶೀಲನಾ ಸಮಿತಿಯ ಉಪ ಸಮಿತಿಯು ನಡೆಸಿರುವ ಸಭೆಯ ನಡವಳಿಗಳು ಅಂತಿಮಗೊಂಡಿದೆಯೇ; ಅಂತಿಮಗೊಳ್ಳದೇ ಇದ್ದಲ್ಲಿ, ಕಾರಣಗಳೇನು; ಯಾವಾಗ ಅಂತಿಮಗೊಳಿಸಲಾಗುವುದು; (ನಡವಳಿಗಳ ಪ್ರತಿಯನ್ನು ನೀಡುವುದು) | |
| ಈ ) | 1967 ರಿಂದ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ತಿದ್ದುಪಡಿ ಮಾಡುವಲ್ಲಿ ವಿಳಂಬವಾಗುತ್ತಿರುವ ಕುರಿತು ಸರ್ಕಾರದ ನಿಲುವೇನು? | |

ಸಂಖ್ಯೆ:ಇಪಿ 237 ಡಿಎಆರ್ 2024 / 1602779

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು

ಅನುಬಂಧ-01

ಟಿಪ್ಪಣಿ ಹಾಳೆ [illegible]

ಸಂಖ್ಯೆ: ಸಿಆಸುಇ 82 ಡಿಸೇನಿ 2018
ಇಡಿ 01 ಡಿಪಿಎ 2018(ಭಾ-3)

ಸಿಆಸುಇ (ಸೇವಾ ನಿಯಮಗಳು-ಡಿ)
ದಿನಾಂಕ: 08.08.2018.

ಸಾರ್ವಜನಿಕ ಶಿಕ್ಷಣ ಇಲಾಖೆ ವೃಂದ ಮತ್ತು ನೇಮಕಾತಿ ನಿಯಮಗಳ ಕರಡು ನಿಯಮಗಳನ್ನು ಪರಿಶೀಲಿಸಿ ಈ ಕೆಳಕಂಡ ಅವಲೋಕನೆಗಳನ್ನು ಮಾಡಲಾಗಿದೆ.

ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ವಿವಿಧ ವೃಂದಗಳನ್ನು ವೇತನ ಶ್ರೇಣಿಗೆ ಅನುಸಾರವಾಗಿ ಅವರೋಹಣ ಕ್ರಮದಲ್ಲಿ ನಮೂದಿಸುವಂತೆ ತಿಳಿಸಲಾಗಿದೆ.

ಕ್ರ.ಸಂ. 1 **ಆಯುಕ್ತರು** : ಭಾರತೀಯ ಆಡಳಿತ ಸೇವೆಯ ಸೂಪರ್ ಟೈಂ ಸ್ಕೇಲ್ ದರ್ಜೆಯ ಅಧಿಕಾರಿಯಿಂದ ಸದರಿ ಹುದ್ದೆಯನ್ನು By Appointment ಮೂಲಕ ಭರ್ತಿ ಮಾಡಲು ಪ್ರಸ್ತಾಪಿಸಿದ್ದು, ಇದನ್ನು encadred to IAS ಎಂದು ನಮೂದಿಸುವ ಬಗ್ಗೆ ಪರಿಶೀಲಿಸುವುದು.

ಕ್ರ.ಸಂ. 2 **ಅಪರ ಆಯುಕ್ತರು**: ನೇಮಕಾತಿ ವಿಧಾನದ ಕಾಲಂನಲ್ಲಿ By KAS ಎನ್ನುವ ಬದಲು By posting of KAS..... ಎಂದು ನಮೂದಿಸುವಂತೆ ತಿಳಿಸಲಾಗಿದೆ.

ಕ್ರ.ಸಂ. 4 **ನಿರ್ದೇಶಕರು (ಆಡಳಿತ)**: ಸದರಿ ಹುದ್ದೆಯ ನೇಮಕಾತಿ ವಿಧಾನದಿಂದ Department of Personnel Administration and Reforms ಎಂಬುದನ್ನು ಕೈಬಿಡುವಂತೆ ತಿಳಿಸಲಾಗಿದೆ.

ಕ್ರ.ಸಂ. 5 **ಜಂಟಿ ನಿರ್ದೇಶಕರು**: ಸದರಿ ವೃಂದದ ನೇಮಕಾತಿ ವಿಧಾನದಿಂದ By Selection ಉಪಬಂಧವನ್ನು ಕೈಬಿಡುವಂತೆ ತಿಳಿಸಲಾಗಿದೆ.

ಕ್ರ.ಸಂ. 7 **Educational Officers (Tutorials)**: ಸದರಿ ವೃಂದದ ಶೇಕಡಾ 100ರಷ್ಟು ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುವುದೆಂದು ನಮೂದಿಸಿ ಶೇಕಡಾ 25ರಷ್ಟು ಹುದ್ದೆಗಳನ್ನು ಸೇವಾ ನಿರತ ಸರ್ಕಾರಿ ಪ್ರೌಢ ಶಾಲೆಯ ಮುಖ್ಯಶಿಕ್ಷಕರು ಗ್ರೇಡ್-2 ಮತ್ತು ಸಮಾನಾಂತರ ವೃಂದಗಳಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಪ್ರಸ್ತಾಪಿಸಿದೆ.

ಶೇಕಡಾ 25ರಷ್ಟು ಹುದ್ದೆಗಳನ್ನು ಸೇವಾ ನಿರತ ಅಭ್ಯರ್ಥಿಗಳಿಂದ ನೇರನೇಮಕಾತಿ ಮೂಲಕ ಭರ್ತಿ ಮಾಡಲು ಪ್ರಸ್ತಾಪಿಸಿರುವುದರಿಂದ ನೇರನೇಮಕಾತಿ ಶೀರ್ಷಿಕೆಯಡಿ ನೇಮಕಾತಿ ವಿಧಾನ ಹಾಗೂ ಕನಿಷ್ಠ ವಿದ್ಯಾರ್ಹತೆಯನ್ನು ನಮೂದಿಸುವಂತೆ ಹಾಗೂ ನೇರನೇಮಕಾತಿಗೆ ಪರೀಕ್ಷಾ ವಿಧಾನ, ಪ್ರಶ್ನೆ ಪತ್ರಿಕೆ, ನಿಗದಿಪಡಿಸಲಾದ ಅಂಕಗಳು ಮತ್ತು ಪರೀಕ್ಷಾ ವಸ್ತು ವಿಷಯದ ಬಗ್ಗೆ ಸ್ಪಷ್ಟವಾಗಿ ಒಂದು ಯೋಜನೆಯನ್ನು ರೂಪಿಸಿ ನಮೂದಿಸುವಂತೆ ತಿಳಿಸಲಾಗಿದೆ.

ಟಿಪ್ಪಣಿ ಹಾಳೆ ಇಪಿಐ 01 ಬಿಎಬಿ 2012

ಕ್ರ.ಸಂ. 8 **Headmaster/Mistress Governemnt High Schools:** ಸದರಿ ವೃಂದದ ಮುಂಬಡ್ತಿ ಕಾಲಂನಲ್ಲಿ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್ 1 ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್ -2 ವೃಂದಗಳಿಗೆ ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸಿದ್ದು ಸದರಿ ವೃಂದಗಳ ನೇರನೇಮಕಾತಿಗೆ ಈಗಾಗಲೇ ಸದರಿ ವಿದ್ಯಾರ್ಹತೆಯನ್ನು ನಿಗದಿಪಡಿಸಿರುವುದರಿಂದ ಮುಂಬಡ್ತಿಗೆ ಮತ್ತೊಮ್ಮೆ ನಿಗದಿಪಡಿಸುವ ಅಗತ್ಯವಿಲ್ಲವೆಂದು ತಿಳಿಸಲಾಗಿದೆ.

ಕ್ರ.ಸಂ. 1 ನಿರ್ದೇಶಕರು. ಕ್ರ.ಸಂ. 5 ಜಂಟಿ ನಿರ್ದೇಶಕರು. ಕ್ರ.ಸಂ. 6 ಡಿಡಿಪಿಐ. ಕ್ರ.ಸಂ. 9 ಜಂಟಿ ನಿರ್ದೇಶಕರು(ದೈಹಿಕ ಶಿಕ್ಷಣ). ಕ್ರ.ಸಂ. 10 ವಿಭಾಗೀಯ ಉಪನಿರ್ದೇಶಕರು (ದೈಹಿಕ ಶಿಕ್ಷಣ). ಕ್ರ.ಸಂ. 15 ಹಿರಿಯ ಸಹಾಯಕ ನಿರ್ದೇಶಕರು **(Vocation Educational)** ಕ್ರ.ಸಂ 17 ಹಿರಿಯ ಸಹಾಯಕ ನಿರ್ದೇಶಕರು **(Dance, Drama and Music Education)** ವೃಂದಗಳ ಮುಂಬಡ್ತಿಗೆ ಕನಿಷ್ಠ 2 ಅಥವಾ 3 ವರ್ಷಗಳ ಅರ್ಹತಾದಾಯಕ ಸೇವೆಯನ್ನು ನಿಗದಿಪಡಿಸುವಂತೆ ತಿಳಿಸಲಾಗಿದೆ.

**ಕ್ರ.ಸಂ. 11 ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ:** ಸದರಿ ವೃಂದದ ಮುಂಬಡ್ತಿಗೆ ಕನಿಷ್ಠ ವಿದ್ಯಾರ್ಹತೆ ಕಾಲಂನಲ್ಲಿ ಪೋಷಕ ವೃಂದಕ್ಕೆ ನಿಗದಿಪಡಿಸಿರುವ ಕನಿಷ್ಠ ಅರ್ಹತಾದಾಯಕ ಸೇವೆಯನ್ನು ನಿಗದಿಪಡಿಸುವಂತೆ ತಿಳಿಸಲಾಗಿದೆ.

ಕ್ರ.ಸಂ.20 **Divisonal Subject Inspector (Sanskrit):** ಸದರಿ ವೃಂದದ ಪದನಾಮವನ್ನು ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಗ್ರೇಡ್ 2 ಮತ್ತು ಸಮಾನಾಂತರ ಹುದ್ದೆಯೆಂದು ಮರುಪದನಾಮೀಕರಿಸಲು ಪ್ರಸ್ತಾಪಿಸಿದ್ದು ಮರುಪದನಾಮೀಕರಿಸಿ ಆದೇಶ ಹೊರಡಿಸಿದ ನಂತರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರ್ಪಡೆಗೊಳಿಸುವಂತೆ ತಿಳಿಸಲಾಗಿದೆ.

ಕ್ರ.ಸಂ. 23 **ಪ್ರೌಢ ಶಾಲಾ ಸಹಶಿಕ್ಷಕರು** (ಗ್ರೇಡ್ -2) (TGT) ಕ್ರ.ಸಂ. 33 **Physcial Education Teacher (Grade-1):** ಸದರಿ ವೃಂದಗಳಿಗೆ ಎನ್‌ಸಿಟಿಇ ನಿಯಮಗಳಲ್ಲಿ ತಿಳಿಸಿರುವಂತೆ ಕನಿಷ್ಠ ವಿದ್ಯಾರ್ಹತೆಯನ್ನು ಸ್ಪಷ್ಟವಾಗಿ ನಮೂದಿಸುವಂತೆ ಹಾಗೂ ಮುಂಬಡ್ತಿಗೆ ಕನಿಷ್ಠ ಅರ್ಹತಾದಾಯಕ ಸೇವೆಯನ್ನು ನಮೂದಿಸುವಂತೆ ತಿಳಿಸಲಾಗಿದೆ.

**Physcial Education Teacher (Grade-1)** ವೃಂದದ ನೇರನೇಮಕಾತಿ ಹಾಗೂ ಮುಂಬಡ್ತಿಗೆ ಶೇಕಡಾವಾರು ಕೋಟಾವನ್ನು ನಿಗದಿಪಡಿಸುವಂತೆ ತಿಳಿಸಲಾಗಿದೆ.

ಕ್ರ.ಸಂ. 17 **ಹಿರಿಯ ಸಹಾಯಕ ನಿರ್ದೇಶಕರು (ಸಾರ್ವಜನಿಕ ಶಿಕ್ಷಣ)** (ಲಿಪಿಕ) ವೃಂದದ ಕನಿಷ್ಠ ವಿದ್ಯಾರ್ಹತೆ ಕಾಲಂನಲ್ಲಿ ಪೋಷಕ ವೃಂದಕ್ಕೆ ಕನಿಷ್ಠ ಅರ್ಹತಾದಾಯಕ ಸೇವೆಯನ್ನು ನಿಗದಿಪಡಿಸುವಂತೆ ತಿಳಿಸಲಾಗಿದೆ.

Scanned with CamScanner

ಟಿಪ್ಪಣಿ ಹಾಳೆ

ಕ್ರ.ಸಂ. 71 ADPI Ministerial /Managers ವೃಂದದ ಪದನಾಮವನ್ನು ADPI Ministerial/Gazetted Managers ಎಂದು ನಮೂದಿಸುವಂತೆ ತಿಳಿಸಲಾಗಿದೆ.

ಕ್ರ.ಸಂ. 82 **ಪ್ರಥಮ ದರ್ಜೆ ಸಹಾಯಕರು:** ಕರ್ನಾಟಕ ಸಿವಿಲ್ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978ರನ್ವಯ ನೇರನೇಮಕಾತಿಗೆ ಕನಿಷ್ಠ ವಿದ್ಯಾರ್ಹತೆಯನ್ನು ವಿವರವಾಗಿ ನಮೂದಿಸುವಂತೆ ತಿಳಿಸಲಾಗಿದೆ.

ಕ್ರ.ಸಂ. 83 **ದ್ವಿತೀಯ ದರ್ಜೆ ಸಹಾಯಕರು:** ಕರ್ನಾಟಕ ಸಿವಿಲ್ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978ರನ್ವಯ ನೇಮಕಾತಿ ವಿಧಾನ ಹಾಗೂ ಕನಿಷ್ಠ ವಿದ್ಯಾರ್ಹತೆಯನ್ನು ವಿವರವಾಗಿ ನಮೂದಿಸುವಂತೆ ತಿಳಿಸಲಾಗಿದೆ.

ಕ್ರ.ಸಂ. 16A **SADPI (Computer Education) :** ವೃಂದದ ಮುಂಬಡ್ತಿಗೆ ಕಾಲಂ 5ರಲ್ಲಿ ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸುವಂತೆ ತಿಳಿಸಲಾಗಿದೆ.

ಕ್ರ.ಸಂ. 84 **ಶೀಘ್ರಲಿಪಿಗಾರರು:** ಸದರಿ ವೃಂದದ ನೇರನೇಮಕಾತಿ ಹಾಗೂ ಮುಂಬಡ್ತಿಗೆ ಶೇಕಡಾವಾರು ಕೋಟಾವನ್ನು ಪ್ರತ್ಯೇಕವಾಗಿ ನಿಗದಿಪಡಿಸಿ ಕರ್ನಾಟಕ ಸಿವಿಲ್ ಸೇವಾ (ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು) ಹುದ್ದೆಗಳ ನೇಮಕಾತಿ ನಿಯಮಗಳು 1983ರನ್ವಯ ಕನಿಷ್ಠ ವಿದ್ಯಾರ್ಹತೆ ಹಾಗೂ ನೇಮಕಾತಿ ವಿಧಾನವನ್ನು ವಿವರವಾಗಿ ನಮೂದಿಸುವಂತೆ ತಿಳಿಸಲಾಗಿದೆ.

ಕ್ರ.ಸಂ. 85 **ಬೆರಳಚ್ಚುಗಾರರು:** ಸದರಿ ವೃಂದದ ನೇರನೇಮಕಾತಿ ಹಾಗೂ ಮುಂಬಡ್ತಿಗೆ ಶೇಕಡಾವಾರು ಕೋಟಾವನ್ನು ಪ್ರತ್ಯೇಕವಾಗಿ ನಿಗದಿಪಡಿಸಿ ಕರ್ನಾಟಕ ಸಿವಿಲ್ ಸೇವಾ (ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು) ಹುದ್ದೆಗಳ ನೇಮಕಾತಿ ನಿಯಮಗಳು 1983ರನ್ವಯ ಕನಿಷ್ಠ ವಿದ್ಯಾರ್ಹತೆ ಹಾಗೂ ನೇಮಕಾತಿ ವಿಧಾನವನ್ನು ವಿವರವಾಗಿ ನಮೂದಿಸುವಂತೆ ತಿಳಿಸಲಾಗಿದೆ.

ಕ್ರ.ಸಂ. 89 **ಪ್ಯೂನ್ಸ್/ಗ್ರೂಪ್ -ಡಿ:** ಗ್ರೂಪ್ ಡಿ ಶ್ರೇಣಿಯಡಿ ಪ್ಯೂನ್ಸ್ ಹಾಗೂ ಇತರೆ ವೃಂದಗಳನ್ನು ನಮೂದಿಸುವಂತೆ ತಿಳಿಸಲಾಗಿದೆ.

ಕರ್ನಾಟಕ ಸಿವಿಲ್ ಸೇವಾ ಇಲಾಖಾ ಪರೀಕ್ಷಾ ನಿಯಮಗಳು 1974ರಡಿ ವಿವಿಧ ವೃಂದಗಳಿಗೆ ಇಲಾಖಾ ಪರೀಕ್ಷೆಯನ್ನು ನಿಗದಿಪಡಿಸಿರುವುದರಿಂದ ಪ್ರತ್ಯೇಕವಾಗಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಮೂದಿಸುವ ಅಗತ್ಯವಿಲ್ಲವೆಂದು ತಿಳಿಸಲಾಗಿದೆ.

ಟಿಪ್ಪಣಿ ಹಾಳೆ ದಿ: 01/08/2018

ಸಿಆಸುಇಲಾಖೆಯ ಅವಲೋಕನೆಗಳನ್ನು ನಿಯಮಗಳಲ್ಲಿ ಅಳವಡಿಸಿಕೊಂಡು ಪರಿಷ್ಕೃತ ಕರಡು ನಿಯಮಗಳ ಪ್ರಸ್ತಾವನೆಯನ್ನು ಆಡಳಿತ ಇಲಾಖೆಯ ಸ್ಪಷ್ಟ ಅಭಿಪ್ರಾಯದೊಂದಿಗೆ ಕಳುಹಿಸುವಂತೆ ಹಾಗೂ ಕರಡು ನೇಮಕಾತಿ ನಿಯಮಗಳನ್ನು ಕನ್ನಡ ಭಾಷೆಯಲ್ಲಿ ಸಿದ್ಧಪಡಿಸಿ ಕಳುಹಿಸುವಂತೆ ತಿಳಿಸಲಾಗಿದೆ.

09/08/18
(ಎ.ವಿ.ಶೈಲಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

1) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ)

ಟಿ.ರ. ನೋಡಿ (7 ದಿನದೊಳಗೆ)

9/8

1) ಅಶ

ವಿಷಯ:-ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ಕುರಿತು.

ಇಡಿ 1 ಡಿಪಿಐ 2018(ಭಾಗ-3)

ಸಂಖ್ಯೆ:ಸಿಆಸುಇ 82 ಡಿಸೇನಿ 2018
ಇಡಿ 01 ಡಿಪಿಐ 2018 (ಭಾಗ-3)

ಸಿಆಸುಇ(ಸೇವಾ ನಿಯಮಗಳು-ಡಿ)
ದಿನಾಂಕ:12.11.2018

ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಸ್ತಾಪಿತ ಕರಡು ನಿಯಮಗಳನ್ನು ಪರಿಶೀಲಿಸಿ, ಕೆಳಕಂಡಂತೆ ಅವಲೋಕನೆ ಮಾಡಲಾಗಿದೆ:

ಕ್ರಮ ಸಂಖ್ಯೆ:09 **Educational Officers:** ಸದರಿ ವೃಂದದ ಶೇ.100ರಷ್ಟು ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುವುದೆಂದು ನಮೂದಿಸಿ ಶೇ.25ರಷ್ಟು ಹುದ್ದೆಗಳನ್ನು ಸೇವಾನಿರತ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕರು ಗ್ರೇಡ್-2 ಮತ್ತು ಸಮಾನಾಂತರ ವೃಂದಗಳಿಂದ ನೇರನೇಮಕಾತಿ ಮೂಲಕ ಭರ್ತಿ ಮಾಡಲು ಪ್ರಸ್ತಾಪಿಸಿದೆ.

ಶೇ.25ರಷ್ಟು ಹುದ್ದೆಗಳನ್ನು ಸೇವಾನಿರತ ಅಭ್ಯರ್ಥಿಗಳಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಪ್ರಸ್ತಾಪಿಸಿರುವುದರಿಂದ ನೇರ ನೇಮಕಾತಿ ಶೀರ್ಷಿಕೆಯಡಿ ನೇಮಕಾತಿ ವಿಧಾನ ಹಾಗು ಕನಿಷ್ಠ ವಿದ್ಯಾರ್ಹತೆಯನ್ನು ನಮೂದಿಸುವಂತೆ ತಿಳಿಸಲಾಗಿದೆ.

**ಕ್ರಮ ಸಂಖ್ಯೆ:39 Senior headmaster: ಸದರಿ ವೃಂದದ** ಹುದ್ದೆಗಳನ್ನು ಹಿರಿಯ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು/ ಪದವೀಧರ ಪ್ರಾಥಮಿಕ ಶಿಕ್ಷಕರು (6ರಿಂದ 8) ವೃಂದಗಳಿಂದ 75:25 ಅನುಪಾತದಲ್ಲಿ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುವುದೆಂದು ನೇಮಕಾತಿ ವಿಧಾನದ ಕಾಲಂನಲ್ಲಿ ನಮೂದಿಸಿದೆ. ಆದರೆ ಕನಿಷ್ಠ ವಿದ್ಯಾರ್ಹತೆ ಕಾಲಂನಲ್ಲಿ 60:40 ಅನುಪಾತದಲ್ಲಿ ಭರ್ತಿ ಮಾಡಲಾಗುವುದೆಂದು ನಮೂದಿಸಿದೆ. ಸದರಿ ಅಂಶವನ್ನು ಪರಿಶೀಲಿಸಿ ವ್ಯತ್ಯಾಸ ಸರಿಪಡಿಸುವಂತೆ ತಿಳಿಸಲಾಗಿದೆ.

**ಕ್ರಮ ಸಂಖ್ಯೆ:39 <u>Senior Assistant Director of Public Instruction (Computer Education)</u>, ಕ್ರಮ ಸಂಖ್ಯೆ:25 <u>Assistant Director of Public Instruction (Computer Education)</u> ವೃಂದಗಳಿಗೆ** ಕನಿಷ್ಠ ವಿದ್ಯಾರ್ಹತೆ ಕಾಲಂನಲ್ಲಿ ಸದರಿ ವೃಂದಗಳ ಮುಂಬಡ್ತಿಗೆ ಪೋಷಕ ವೃಂದಗಳಿಗೆ ಕನಿಷ್ಠ ಅರ್ಹತಾದಾಯಕ ಸೇವೆಯನ್ನು ನಿಗದಿಪಡಿಸುವಂತೆ ತಿಳಿಸಲಾಗಿದೆ.

**ಕ್ರಮ ಸಂಖ್ಯೆ:3-C Deputy Director of Public Instruction (Ministerial), ಕ್ರಮ ಸಂಖ್ಯೆ:17 Senior Assistant Director of Public Instruction (Ministerial) :** ವೃಂದಗಳ ಮುಂಬಡ್ತಿಗೆ ಕನಿಷ್ಠ ಅರ್ಹತಾದಾಯಕ ಸೇವೆಯನ್ನು ಒಂದು ವರ್ಷಕ್ಕೆ ನಿಗದಿಪಡಿಸಲಾಗಿದೆ. ಇದನ್ನು 2 ಅಥವಾ 3 ವರ್ಷಕ್ಕೆ ನಿಗದಿಪಡಿಸುವಂತೆ ತಿಳಿಸಲಾಗಿದೆ.

ಕ್ರಮ ಸಂಖ್ಯೆ:84 ಶೀಘ್ರಲಿಪಿಗಾರರು ಮತ್ತು ಕ್ರಮ ಸಂಖ್ಯೆ:85 ಬೆರಳಚ್ಚುಗಾರರು : ಈ ವೃಂದಗಳ ಹುದ್ದೆಗಳನ್ನು ಕರ್ನಾಟಕ ಸಿವಿಲ್ ಸೇವಾ (ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ಹುದ್ದೆಗಳ) ನೇಮಕಾತಿ ನಿಯಮಗಳು-1983ರನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯು ಭರ್ತಿ ಮಾಡಬೇಕಿದ್ದು, ಸದರಿ ನಿಯಮಗಳಲ್ಲಿನ ಷರತ್ತುಗಳಿಂದ ಸಾರ್ವಜನಿಕ ಶಿಕ್ಷಣ ಇಲಾಖೆಗೆ ವಿನಾಯಿತಿ ನೀಡಲಾಗಿರುವುದಿಲ್ಲ.

ಪ್ರಸ್ತಾಪಿತ ಕರಡು ನಿಯಮಗಳಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ವೃಂದಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಬದಲು ತಮ್ಮ ಇಲಾಖೆಯಿಂದಲೇ ಆಯ್ಕೆ ಪ್ರಾಧಿಕಾರದ ಮೂಲಕ ನೇಮಕ ಮಾಡಲು ಉದ್ದೇಶಿಸಿದೆ.

ವಾಸ್ತವವಾಗಿ, ಭಾರತ ಸಂವಿಧಾನದ ಅನುಚ್ಛೇದ 320ರ ಪ್ರಕಾರ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇಮಕಾತಿ ಮಾಡುವ ಸಂಬಂಧವಾಗಿ ಪರೀಕ್ಷೆಗಳನ್ನು ನಡೆಸುವುದು ರಾಜ್ಯ ಲೋಕಸೇವಾ ಆಯೋಗದ ಕರ್ತವ್ಯವಾಗಿರುತ್ತದೆ. ಸಿವಿಲ್ ಸೇವೆಗಳಿಗೆ ಮತ್ತು ಸಿವಿಲ್ ಹುದ್ದೆಗಳಿಗೆ ನೇರ ನೇಮಕಾತಿ ಅಥವಾ ಮುಂಬಡ್ತಿ ಮೂಲಕ ಭರ್ತಿ ಮಾಡುವ, ಶಿಸ್ತು ಪ್ರಕರಣಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಆಯೋಗದೊಡನೆ ಸಮಾಲೋಚನೆ ನಡೆಸುವುದು ಅವಶ್ಯಕವಾಗಿರುತ್ತದೆ. ಮೇಲ್ಕಂಡ ಅನುಚ್ಛೇದದಡಿ ಇರುವ ಪರಂತುಕದನ್ವಯ ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದ ಸಿವಿಲ್ ಸೇವೆಗಳ ಮತ್ತು ಹುದ್ದೆಗಳ ಬಗ್ಗೆ ರಾಜ್ಯಪಾಲರು ಯಾವ ವಿಷಯಗಳಲ್ಲಿ ಸಾಮಾನ್ಯವಾಗಿ ಅಥವಾ ಯಾವುದೇ ನಿರ್ದಿಷ್ಟ ಸಂದರ್ಭದಲ್ಲಿ ಅಥವಾ ಯಾವುದೇ ನಿರ್ದಿಷ್ಟ ಸನ್ನಿವೇಶಗಳಲ್ಲಿ ಲೋಕಸೇವಾ ಆಯೋಗದೊಡನೆ ಸಮಾಲೋಚನೆ ಮಾಡುವುದು ಅವಶ್ಯವಾಗಿಲ್ಲವೋ ಆ ವಿಷಯಗಳನ್ನು ನಿರ್ದಿಷ್ಟಪಡಿಸಿ ವಿನಿಮಯಗಳನ್ನು ರಚಿಸಲು ಆಸ್ಪದವಿರುತ್ತದೆ. ಈ ಹಿನ್ನಲೆಯಲ್ಲಿ, ಕರ್ನಾಟಕ ಸಿವಿಲ್ ಸೇವಾ (ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ಹುದ್ದೆಗಳ) ನೇಮಕಾತಿ ನಿಯಮಗಳು-1983ರನ್ವಯ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ವೃಂದಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಭರ್ತಿ ಮಾಡಲು ಕ್ರಮವಹಿಸುವಂತೆ ಆಡಳಿತ ಇಲಾಖೆಗೆ ತಿಳಿಸಲಾಗಿದೆ.

**(ಸರ್ಕಾರದ ಕಾರ್ಯದರ್ಶಿ, ಸಿಆಸುಇ ರವರಿಂದ ಅನುಮೋದಿತ)**

13/11/18

(ಎ.ವಿ.ಶೈಲಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತಸುಧಾರಣೆ ಇಲಾಖೆ
(ಸೇವಾ ನಿಯಮಗಳು-2).

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ)

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ಮಾಡುವ ಕುರಿತು.

ಸಂಖ್ಯೆ:ಸಿಆಸುಇ96ಡಿಸೇನಿ2019

## ಟಿಪ್ಪಣಿ ಹಾಳೆ

ಸಂಖ್ಯೆ:ಸಿಆಸುಇ 96 ಡಿಸೇನಿ 2018
ಇಡಿ 01 ಡಿಪಿಐ 2018 (ಭಾಗ-3)

ಸಿಆಸುಇ(ಸೇವಾ ನಿಯಮಗಳು-ಡಿ)
ದಿನಾಂಕ:20.12.2019.

37) ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಸ್ತಾಪಿತ ಕರಡು ನಿಯಮಗಳನ್ನು ಪರಿಶೀಲಿಸಿ, ಕೆಳಕಂಡಂತೆ ಅವಲೋಕನ ಮಾಡಲಾಗಿದೆ:

1) **ಕ್ರಮ ಸಂಖ್ಯೆ:07 Deputy Director Of Public Instruction (DDPI):**
ಇಲಾಖಾ ಮುಖ್ಯಸ್ಥರ ಹುದ್ದೆಯನ್ನು ಮಾತ್ರ ಆಯ್ಕೆ ಮೂಲಕ ಮುಂಬಡ್ತಿಯಿಂದ ತುಂಬಲು ನಿಯಮಗಳಲ್ಲಿ ಆಸ್ಪದವಿರುವುದರಿಂದ DDPI ಹುದ್ದೆಯನ್ನು ಆಯ್ಕೆ ಮೂಲಕ ಮುಂಬಡ್ತಿಯಿಂದ ತುಂಬಲು ನಿರ್ಧರಿಸಿರುವುದಕ್ಕೆ ಸಕಾರಣವನ್ನು ಒದಗಿಸುವಂತೆ ತಿಳಿಸಲಾಗಿದೆ.

2) **ಕ್ರಮ ಸಂಖ್ಯೆ: 07 Educational Officers (Tutorials) :** ಪ್ರಸ್ತಾಪಿತ ಕರಡು ನಿಯಮಗಳಲ್ಲಿ ಸದರಿ ವೃಂದದ ಶೇ.75ರಷ್ಟು ಹುದ್ದೆಗಳನ್ನು ಪ್ರೌಢಶಾಲಾ ಮುಖ್ಯೋಪಾಧ್ಯಾಯರು/ ಮುಖ್ಯೋಪಾಧ್ಯಾಯಿನಿಯರು ವೃಂದದಿಂದ ಸೇವಾ ಹಿರಿತನದ ಆಧಾರದ ಮೇಲೆ ಮತ್ತು ಸಮನಾಂತರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಹಾಗೂ ಶೇ.25ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆಸ್ಪದ ಕಲ್ಪಿಸಲಾಗಿದೆ. ಆದರೆ, ಈ ಹಿಂದೆ ಕಳುಹಿಸಲಾಗಿದ್ದ ಕರಡು ನಿಯಮಗಳಲ್ಲಿ ಶೇ.25ರಷ್ಟು ಹುದ್ದೆಗಳನ್ನು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಸಮನಾಂತರ ವೃಂದದಲ್ಲಿ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಿದ ಸೇವಾ ನಿರತ ಶಿಕ್ಷಕರಿಂದ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿಯಿಂದ ಭರ್ತಿ ಮಾಡಲು ಉದ್ದೇಶಿಸಲಾಗಿತ್ತು. ಆದುದರಿಂದ ಶೇ.25ರಷ್ಟು ಹುದ್ದೆಗಳನ್ನು ಸಾಮಾನ್ಯ ಅಭ್ಯರ್ಥಿಗಳಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುವುದೇ ಅಥವಾ ಸೇವಾ ನಿರತ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದೇ ಎಂಬುದನ್ನು ಸ್ಪಷ್ಟಪಡಿಸುವಂತೆ ತಿಳಿಸಲಾಗಿದೆ.

3) **ಕ್ರಮ ಸಂಖ್ಯೆ 39 : ಹಿರಿಯ ಮುಖ್ಯ ಶಿಕ್ಷಕರು (ಹಿರಿಯ ಪ್ರಾಥಮಿಕ ಶಾಲೆ) ಮತ್ತು ಕ್ರಮ ಸಂಖ್ಯೆ 64 (ಎ) ಮುಖ್ಯ ಶಿಕ್ಷಕರು / ಮುಖ್ಯ ಶಿಕ್ಷಕಿಯರು (ಹಿರಿಯ ಪ್ರಾಥಮಿಕ ಶಾಲೆ) :** ಸದರಿ ವೃಂದಗಳ ಹುದ್ದೆಗಳನ್ನು ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಪದವಿಧರ ಪ್ರಾಥಮಿಕ ಶಾಲಾ ಶಿಕ್ಷಕರಿಂದ 75:25 ಅನುಪಾತದಲ್ಲಿ ಮುಂಬಡ್ತಿ ಮೂಲಕ ಭರ್ತಿ ಮಾಡಲು ಉದ್ದೇಶಿಸಿದೆ.

ಮುಂಬಡ್ತಿಗೆ ಪೋಷಕ ವೃಂದಗಳ ವೃಂದ ಬಲದಲ್ಲಿನ ಹುದ್ದೆಗಳ ಸಂಖ್ಯೆ ಅನುಸಾರವಾಗಿ ಅನುಪಾತವನ್ನು ನಿಗದಿಪಡಿಸುವಂತೆ ತಿಳಿಸಲಾಗಿದೆ.

4) **ಕ್ರಮ ಸಂಖ್ಯೆ:82 First Division Assistant** : ಸದರಿ ವೃಂದದ ನೇಮಕಾತಿ ವಿಧಾನದ ಕಾಲಂನಲ್ಲಿ ನೇರ ನೇಮಕಾತಿ ಶೀರ್ಷಿಕೆಯಡಿ ಕರ್ನಾಟಕ ಸಿವಿಲ್ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ)ನಿಯಮಗಳು, 1978ರನ್ವಯ ಎಂದು ನಮೂದಿಸುವಂತೆ ಹಾಗೂ ಸದರಿ ವೃಂದದ ಮುಂಬಡ್ತಿಗೆ ಡಾಟಾ ಎಂಟ್ರೀ ಆಪರೇಟರ್ ವೃಂದವನ್ನು ಪರಿಗಣಿಸಿರುವುದರ ಕುರಿತು ಪರಿಶೀಲಿಸುವಂತೆ ತಿಳಿಸಲಾಗಿದೆ.

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ಮಾಡುವ ಕುರಿತು.

ಸಂಖ್ಯೆ:ಸಿಆಸುಇ96ಸೇನಿ20

## ಟಿಪ್ಪಣಿ ಹಾಳೆ

5) ಕ್ರಮ ಸಂಖ್ಯೆ: 83 **Second Division Assistant** ಕರ್ನಾಟಕ ಸಿವಿಲ್ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978ರಲ್ಲಿ ಶೇ.67ರಷ್ಟು ಹುದ್ದೆಗಳನ್ನು ನೇರನೇಮಕಾತಿ ಮೂಲಕ ಹಾಗೂ ಶೇ.33ರಷ್ಟು ಹುದ್ದೆಗಳನ್ನು ವಾಹನ ಚಾಲಕ ವೃಂದದಿಂದ ವರ್ಗಾವಣೆ ಮೂಲಕ ಭರ್ತಿ ಮಾಡಲು ಹಾಗೂ ವರ್ಗಾವಣೆಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಗ್ರೂಪ್- ಡಿ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಅವಕಾಶವಿರುವುದರಿಂದ ಸದರಿ ನಿಯಮಗಳನ್ವಯ ಪರಿಶೀಲಿಸಿ ನೇಮಕಾತಿ ವಿಧಾನ ನಿಗದಿಪಡಿಸುವಂತೆ ತಿಳಿಸಲಾಗಿದೆ.

6) ಕ್ರಮ ಸಂಖ್ಯೆ:84 ಶೀಘ್ರಲಿಪಿಗಾರರು ಸದರಿ ವೃಂದದ ಹುದ್ದೆಗಳನ್ನು ಕರ್ನಾಟಕ ಸಿವಿಲ್ ಸೇವಾ (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಗಳು 1983ರನ್ವಯ ಕರ್ನಾಟಕ ಲೋಕಸೇವಾ ಆಯೋಗದಿಂದ ಭರ್ತಿ ಮಾಡಲು ಕರಡು ನಿಯಮಗಳಲ್ಲಿ ಅವಕಾಶ ಕಲ್ಪಿಸಿರುವುದರಿಂದ ಹುದ್ದೆಗಳ ನೇರ ನೇಮಕಾತಿಗೆ ಅರ್ಜಿ ಕರೆಯುವುದು, ಆಯ್ಕೆ ಪಟ್ಟಿ ತಯಾರಿಸುವುದು ಇತ್ಯಾದಿ ಅಂಶಗಳನ್ನು ನಿಯಮಗಳಲ್ಲಿ ನಮೂದಿಸುವ ಅಗತ್ಯವಿಲ್ಲವೆಂದು ತಿಳಿಸಲಾಗಿದೆ.

7) ಕ್ರಮ ಸಂಖ್ಯೆ: 84 (ಎ) **Data Entry Operator :** ಸದರಿ ವೃಂದದ ವೇತನ ಶ್ರೇಣಿ ವಿದ್ಯಾರ್ಹತೆ ಕುರಿತಂತೆ ಸಿಆಸುಇ (ಇ-ಆಡಳಿತ)ದಿಂದ ಅಭಿಪ್ರಾಯ ಪಡೆಯುವಂತೆ ತಿಳಿಸಲಾಗಿದೆ.

8) ಕ್ರಮ ಸಂಖ್ಯೆ:85 ಬೆರಳಚ್ಚುಗಾರರು : ಸದರಿ ವೃಂದದ ಹುದ್ದೆಗಳನ್ನು ಕರ್ನಾಟಕ ಸಿವಿಲ್ ಸೇವಾ (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಗಳು 1983ರನ್ವಯ ಕರ್ನಾಟಕ ಲೋಕಸೇವಾ ಆಯೋಗದಿಂದ ಭರ್ತಿ ಮಾಡಲು ಕರಡು ನಿಯಮಗಳಲ್ಲಿ ಅವಕಾಶ ಕಲ್ಪಿಸಿರುವುದರಿಂದ ಹುದ್ದೆಗಳ ನೇರ ನೇಮಕಾತಿಗೆ ಅರ್ಜಿ ಕರೆಯುವುದು, ಆಯ್ಕೆ ಪಟ್ಟಿ ತಯಾರಿಸುವುದು ಇತ್ಯಾದಿ ಅಂಶಗಳನ್ನು ನಿಯಮಗಳಲ್ಲಿ ನಮೂದಿಸುವ ಅಗತ್ಯವಿಲ್ಲವೆಂದು ತಿಳಿಸಲಾಗಿದೆ.

9) ಕ್ರಮ ಸಂಖ್ಯೆ 88: ಅಟೆಂಡರ್: ಸದರಿ ವೃಂದದ ಮುಂಬಡ್ತಿಗೆ ಕನಿಷ್ಠ ಐದು ವರ್ಷಗಳ ಅರ್ಹತಾದಾಯಕ ಸೇವೆ ಸಲ್ಲಿಸಿದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಮೂರು ವರ್ಷಗಳು ಅರ್ಹತಾದಾಯಕ ಸೇವೆ ಸಲ್ಲಿಸಿದ ಅಭ್ಯರ್ಥಿಗಳನ್ನು ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ. ಗ್ರೂಪ್ ಡಿ ವೃಂದದಿಂದ ಮುಂಬಡ್ತಿಗೆ ಕನಿಷ್ಠ ಐದು ವರ್ಷಗಳ ಅರ್ಹತಾದಾಯಕ ಸೇವೆಯನ್ನು ನಿಗದಿಪಡಿಸುವಂತೆ ತಿಳಿಸಲಾಗಿದೆ.

2) ಮೇಲ್ಕಂಡ ಅವಲೋಕನೆಗಳೊಂದಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ತಿದ್ದುಪಡಿಯ ಕರಡು ನಿಯಮಗಳ ಪ್ರಸ್ತಾವನೆಯನ್ನು ಇಲಾಖಾ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿನ ವೃಂದ ಪರಿಶೀಲನಾ ಉಪ ಸಮಿತಿ ಸಭೆ ಮುಂದೆ ಮಂಡಿಸುವಂತೆ ಆಡಳಿತ ಇಲಾಖೆಗೆ ತಿಳಿಸಲಾಗಿದೆ.

(ಸರ್ಕಾರದ ಕಾರ್ಯದರ್ಶಿ, ಸಿಆಸುಇ ರವರಿಂದ ಅನುಮೋದಿತ)

(ಚಂದ್ರಹಾಸ ಗಂ.ತಾಳೂಕರ)
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತಸುಧಾರಣೆ ಇಲಾಖೆ
(ಸೇವಾ ನಿಯಮಗಳು-2).

38) ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ)

Scanned with CamScanner

ಟಿಪ್ಪಣಿ ಹಾಳೆ ಇಡಿ 01 ಡಿಪಿಐ 2018

11) ಸಂಖ್ಯೆ: ಸಿಆಸುಇ 257 ಇಜಿಎಂ 2020 (363492) ಇಡಿ 01 ಡಿಪಿಐ 2018 (ಭಾ-5) (180050)

ಸಿ.ಆ.ಸು. ಇಲಾಖೆ (ಇ-ಆಡಳಿತ)
ದಿನಾಂಕ:11-11-2020

ಶಿಕ್ಷಣ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 06 ಡಿಜಿಒ 2008, ದಿನಾಂಕ: 12-05-2008ರಲ್ಲಿ "ಗುಮಾಸ್ತ-ಕಂ-ಬೆರಳಚ್ಚುಗಾರರು" ವೃಂದವನ್ನು ಡಾಟಾ ಎಂಟ್ರಿ ಆಪರೇಟರ್ ಎಂದು ಪುನರ್ ಪದನಾಮೀಕರಿಸಿ ಆದೇಶಿಸಲಾಗಿದೆ. ಕರ್ನಾಟಕ ನಾಗರಿಕ ಸೇವಾ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ವೃಂದದ ನೇಮಕಾತಿ) ನಿಯಮಗಳು 1983ಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 105 ಎಸ್‌ಸಿಆರ್ 2017, ದಿನಾಂಕ: 28-10-2020ರ ಅಧಿಸೂಚನೆಯನ್ನು ಪ್ರಕಟಿಸಿ, ನಿಯಮಗಳಿಗೆ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಕರಡು ನಿಯಮಗಳಲ್ಲಿ ಡಾಟಾ ಎಂಟ್ರಿ ಅಸಿಸ್ಟೆಂಟ್‌ಗಳಿಗೆ ನೇರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ Syllabusನ್ನು ನಿಗದಿಪಡಿಸಲಾಗಿರುತ್ತದೆ ಆದ್ದರಿಂದ, ಸದರಿ ಕರಡು ನಿಯಮಗಳು ಅಂತಿಮ ನಿಯಮಗಳಾಗಿ ಅಧಿಸೂಚನೆ ಹೊರಡಿಸಿದ ನಂತರ ವಿದ್ಯಾರ್ಹತೆ, ನೇಮಕಾತಿಯ ಕಾರ್ಯವಿಧಾನದ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)ಯ ಹಾಗೂ ವೇತನ ಶ್ರೇಣಿಯ ಕುರಿತು ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆಯುವ ಬಗ್ಗೆ ಪರಿಶೀಲಿಸುವಂತೆ ತಿಳಿಸಲಾಗಿದೆ.

(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರಿಂದ ಅನುಮೋದಿಸಲ್ಪಟ್ಟಿದೆ)

11-11-2020
(ವೀರಭದ್ರ)
ಪೀಠಾಧಿಕಾರಿ-1
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ಇ-ಆಡಳಿತ)

12) ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

13/11

ದಿನಾಂಕ 17-11-2020

13)

ಅನುಬಂಧ-02

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆ ಬಗ್ಗೆ.

ಇಡಿ 01 ಡಿಪಿಐ 2018(ಭಾಗ-1)

---

ಸಂಖ್ಯೆ: ಆಇ 460 ಸೇ-3/18

ಆರ್ಥಿಕ ಇಲಾಖೆ (ಸೇವೆಗಳು-3),
ದಿನಾಂಕ: 10.07.2018.

9) ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆ 89 ವೃಂದಗಳಿದ್ದು, ಸದರಿ 89 ವೃಂದಗಳ ವೃಂದಬಲವನ್ನು ಪರಿಶೀಲಿಸಲು ಅನುಕೂಲವಾಗುವಂತೆ, ಮಂಜೂರು/ರದ್ಧತಿ/ಉನ್ನತೀಕರಣ ಆಗಿರುವ ಹುದ್ದೆಗಳಿಗೆ ಸಂಬಂಧಪಟ್ಟ ಮಾಹಿತಿಯೊಂದಿಗೆ/ಆದೇಶಗಳ ಪ್ರತಿಗಳೊಂದಿಗೆ ಈ ವಿಷಯದಲ್ಲಿ ಹೆಚ್ಚಿನ ಮಾಹಿತಿ ಹೊಂದಿರುವ ಅಧಿಕಾರಿ/ಸಿಬ್ಬಂದಿಯನ್ನು ಆರ್ಥಿಕ ಇಲಾಖೆ (ಸೇವೆಗಳು-3) ಶಾಖೆಯನ್ನು ಸಂಪರ್ಕಿಸುವಂತೆ ಆಡಳಿತ ಇಲಾಖೆಯನ್ನು ಕೋರಿದೆ.

[ಸರ್ಕಾರದ ಕಾರ್ಯದರ್ಶಿ(ವೆಚ್ಚ)
ಆರ್ಥಿಕ ಇಲಾಖೆ, ಇವರಿಂದ ಅನುಮೋದಿತ]

(ಜಿ.ಬಿ. ಹೇಮಣ್ಣ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-1).

10) ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ
(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ).

11/7/18

11) [illegible]

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆ ಬಗ್ಗೆ.

ಇಡಿ 01 ಡಿಪಿಐ 2018(ಭಾಗ-1)

ಸಂಖ್ಯೆ: ಆಇ 869 ಸೇ-3/2018

ಆರ್ಥಿಕ ಇಲಾಖೆ (ಸೇವೆಗಳು-3)
ದಿನಾಂಕ:20.12.2018.

ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವುದಕ್ಕೆ ಆರ್ಥಿಕ ಇಲಾಖೆಯ ಸಂಖ್ಯೆ: ಆಇ 502 ಸೇ-3/2011, ದಿನಾಂಕ:13.04.2011 ರಲ್ಲಿ ಹುದ್ದೆಗಳ ವೃಂದ ಬಲವನ್ನು ಸಂಬಂಧಿಸಿದ ವೇತನ ಶ್ರೇಣಿಯೊಂದಿಗೆ ಉದ್ದೇಶಿತ ಕರಡು ನಿಯಮಗಳಲ್ಲಿ ಅಳವಡಿಸಿಕೊಳ್ಳಲು ಸಹಮತಿ ನೀಡಿದ್ದು, ಮುಂದುವರೆದು, ಪ್ರಸ್ತುತದಲ್ಲಿ ಆಡಳಿತ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಂಬಂಧಿಸಿದಂತೆ, ಒದಗಿಸಿರುವ ಸರ್ಕಾರಿ ಆದೇಶಗಳು ಹಾಗೂ ಮಾಹಿತಿಯನ್ನು ನಿಯೋಜಿತ ಸಿಬ್ಬಂದಿಯೊಂದಿಗೆ ಪೂರ್ಣವಾಗಿ ಪರಿಶೀಲಿಸಲಾಗಿದೆ. ಅಂತಿಮವಾಗಿ, ಅನುಬಂಧದಲ್ಲಿರುವ ಹುದ್ದೆಗಳನ್ನು ಅಳವಡಿಸಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿಯನ್ನು ನೀಡಿದೆ.

ಮುಂದುವರೆದು, ಭಾಗ-1 ರ ಕ್ರಮ ಸಂಖ್ಯೆ: 8 ರಲ್ಲಿನ ಪ್ರೌಢಶಾಲೆಯ ಮುಖ್ಯಶಿಕ್ಷಕರು/ಶಿಕ್ಷಕಿಯರು 88 ಹುದ್ದೆ ಮತ್ತು 304 ಹುದ್ದೆಗಳು ಹಾಗೂ ಭಾಗ-2 ರಲ್ಲಿನ ~~ಕ್ರಮ~~ ಸಂಖ್ಯೆ: 23 ~~ಪ್ರೌಢ~~ ಶಾಲಾ ಸಹ ಶಿಕ್ಷಕ/ಶಿಕ್ಷಕರ ಗ್ರೇಡ್-2 ರ 1520 ಹುದ್ದೆಗಳು ಹಾಗೂ ಕ್ರಮ ಸಂಖ್ಯೆ: 33 ರ ದೈಹಿಕ ಶಿಕ್ಷಕರು ಗ್ರೇಡ್-1 ರ 304 ಹುದ್ದೆಗಳು ಮತ್ತು ಭಾಗ-4 ರ ಕ್ರಮ ಸಂಖ್ಯೆ: 49 ರ ಲೆಕ್ಕ ಅಧೀಕ್ಷಕರು 34 ಹುದ್ದೆಗಳು ಸೃಜಿಸಿರುವ ಆದೇಶದ ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಒದಗಿಸಿದ ನಂತರದಲ್ಲಿ ವೃಂದ ಬಲಕ್ಕೆ ಸೇರ್ಪಡೆಗೊಳಿಸಲು ಅನುಮತಿಸಲಾಗುವುದೆಂದು ಎಂದು ತಿಳಿಸಿದೆ.

ಸರ್ಕಾರದ ಕಾರ್ಯದರ್ಶಿ (ವೆಚ್ಚ)
ಆರ್ಥಿಕ ಇಲಾಖೆ, ಇವರಿಂದ ಅನುಮೋದಿತ।

(ಜಿ.ದಿ. ಹೇಮಣ್ಣ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-1).

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ).

Scanned with CamScanner

## PART-1

## GROUP A AND B TUTORIAL CADRE OFFICERS OF THE DEPARTMENT OF PUBLIC INSTRUCTION

| Sl. NO | DESIGANATION | NO OF POSTS | | | |
|---|---|---|---|---|---|
| | | Pay Scale | P | T | TOTAL |
| 1 | Commissioner for public Instruction | Encadred in IAS | 01 | - | 01 |
| 2 | Additional Commissioner For Public Instruction Gulburga & Dharwad | Encadred in KAS Super Time Scale /selection Grade officers | 02 | - | 02 |
| 3 | Director of Public Instruction<br>1. DPI(Pry.Edn)<br>2. DPI(Sec.Edn)<br>3. DPI(Exam)KSEEB<br>4. DPI(Other Exams)<br>5. DPI (Urdu & Other Minority Lanuage school)<br>6. DPI ACPI Dharwad<br>7. DPI ACPI Gulbarga<br>8. DPI(MD Text BOOK Society)<br>9. DPI State Project ~~Officer~~(SSA)<br>10.DPI(RMSA)<br>11.Director (SISLEP) Dharwad | 90500-123300 | 07 | 04 | 11 |
| 4 | Director (Admin) O/o the CPI, B'lore | 90500-123300 | 01 | - | 01 |
| 5 | Joint Director Of Public Instruction<br>1.Joint Directior (School Edn)(1)<br>2. Secretary (KSEEB)(1)<br>3. Joint Director(MMS)(1)<br>4. Divisional Secretary & Ex officio Joint Director in four Divisions(4)<br>5. Joint Director o/o ACPI Dharwad(1)<br>6. Joint Director o/o ACPI Gulbarga(1)<br>7. Joint Director o/o SPD(SSA)(2)<br>8. Joint Director(KSQAO)(1)<br>9. Joint Director (DSERT) | 74400-109600 | 9 | 4 | 13 |

| | | | | | |
|---|---|---|---|---|---|
| 6 | Deputy Director of public Instruction Cadre<br>1. DDPI (Admin)(34)<br>2. DDPI (Sec. Edn)(1)<br>3. DDPI (Pry.Edn)(1)<br>4. DDPI(Planning)(1)<br>5. DDPI (Sanskrit)(1)<br>6. DDPI o/o ACPI Dharwad(1)<br>7. DDPI o/o ACPI Gulbarga(1)<br>8. DDPI (Text book society)(1)<br>9. DDPI (KSQAO)(1)<br>10. DDPI o/o State Project Officer SSA)(3)<br>11. DDPI (KSWF & KTWF)(1)<br>12. DDPI (RMSA)(2) | 67550-104600 | 40 | 8 | 48 |
| 7 | Educational Officers<br>1. Block Educational Officers(204)<br>2. Educational Officers(47)<br>3. Senior ADPI(MMS)(1)<br>4. Senior ADPI (KSEEB)(6)<br>5. E.Os in the Directorate of urdu & other Minirity Language School(4)<br>6. Senior ADPI in o/o CPI(8)<br>7. Eo in o/o ACPI Gulbarga(5)<br>8. Eo in o/o ACPI Dharwar(2)<br>9. Educational Officers MMS(32)<br>10. Senior ADPI(Text Books)(5)<br>11. Program Officer SSA SPO(5)<br>12. Program Officer TBF(2)<br>13. Deputy Project Co-coordinators in SSA(34)<br>14. Programme Officer RMSA (04)<br>15. Deputy Project Co Coordinators in RMSA(34)<br>16. SADPI, SISLIP, Dharwad (01) | 52650-97100 | 309 | 84 | 393 |
| 8 | Head Masters/Mistresses of Govt High Schools Consisting the Following Posts<br>1. Headmasters/Mistresses of Govt High Schools (3264)<br>2. Subject Inspectors in the | 43100-83900 | 4023 | 498 | 4521 |

Scanned with CamScanner

| | | | | | |
|---|---|---|---|---|---|
| 1 | o/o of DDPI's & Div JDPI Officers (174)<br>3. Vice Principals in Govt Composits in PU Collages (392)<br>4. Asst Directors in (Akshara Dasoha) (177)<br>5. Asst Director in CPI (3)<br>6. Asst Director in KSEEB(4)<br>7. Head Masters RMSA (541)*<br>8. AsstDirector in Text Book (4)*<br>9. Asst Director in KSQAC (2)*<br>10. Asst Director in ACPI Dharwad & Kalburgi (9)<br>11. Block resource co-coordinators under SSA(203)*<br>12. Jr. Programme Officer SSA (7)*<br>13. Jr. Programme officer RMSA(3)*<br>14. Asst Project co-oridinators SSA (76)*<br>15. Asst Project Co-ordinators RMSA (34)* | | | | |
| 9 | Joint Director(Physical Education) | 74400-109600 | 01 | - | 01 |
| 10 | Divisional Deputy Director (Physical Education) | 67550-104600 | 04 | - | 04 |
| 11 | 1. District Physical education Officer(34)<br>2. CPI Bangalore(01)<br>3. KSEEB (01) | 52650-97100 | 36 | - | 36 |
| 12 | Physical Education Inspector in the Office of the Block Education Officer(202) | 43100-83900 | 202 | - | 202 |
| 13 | Senior Assistant Director Of Public Instruction(DRAWING) | 52650-97100 | 01 | - | 01 |
| 14 | Assistant Director Of Public Instruction (Drawing) {including 01 post in CPIoffice} | 40900-78100 | 09 | - | 09 |
| 15 | Senior Assistant Director (Vocational Edn) | 52650-97100 | 01 | - | 01 |
| 16 | Subject Inspector (Voc. Edn) in office of the DDPI in the District | 43100-83900 | 29 | 5 | 34 |
| 17 | State Superintendent Of Dance Drama & Music Education | 37900-70850 | 01 | - | 01 |
| 18 | Divisional Superintendent Of Dance Drama & Music Education | 43100-83900 | 04 | - | 04 |
| 19 | Subject Inspector (Sanskrit) | 43100-83900 | 04 | - | 04 |
| | TOTAL | | 4684 | 603 | 5287 |

20/7

Scanned with CamScanner

# PART-1A

## GROUP A AND B TUTORIAL CADRE OFFICERS OF THE DEPARTMENT OF PUBLIC INSTRUCTION

| I. O | DESIGANATION | NO OF POSTS | | | |
|---|---|---|---|---|---|
| | | Pay Scale | P | T | TOTAL |
| 1 | DPI(DSERT) | 90500-123300 | 01 | - | 01 |
| 2 | Joint Director(DSERT) | 74400-109600 | 01 | - | 01 |
| 3 | Principal College of Teachers Education | 74400-109600 | 06 | - | 06 |
| 4 | DDPI(DSERT) | 67550-104600 | 02 | - | 02 |
| 5 | DDPI (DEVP) & Principal Of DIETs | 67550-104600 | 30 | - | 30 |
| 6 | READERs in CET | 67550-104600 | 18 | - | 18 |
| 7 | SADPI (DSERT) | 52650-97100 | 13 | - | 13 |
| 8 | Lecturer CTE | 52650-97100 | 72 | - | 72 |
| 9 | Senior Lecturer DIETs | 52650-97100 | 200 | - | 200 |
| 10 | Principle Govt. TTI | 52650-97100 | 14 | - | 14 |
| 11 | Principle Govt in Hindi Teachers College Mysore | 52650-97100 | 01 | - | 01 |
| 12 | Lecturer DIETS | 43100-83900 | 422 | - | 422 |
| 13 | Lectures in Govt Hindi Teachers College Mysore | 43100-83900 | 02 | - | 02 |
| 14 | Lecturer Govt. in TTI | 43100-83900 | 101 | - | 101 |
| 15 | Senior Assistant Director (Physical Education) DSERT | 52650-97100 | 01 | - | 01 |
| 16. | Lecture (Physical Education) in DIETS | 43100-83900 | 22 | - | 22 |
| 17 | Principal Government Physical Education College Chikkaballapur | 43100-83900 | 01 | - | 01 |
| 18 | Artist (DSERT) | 43100-83900 | 01 | - | 01 |
| 19 | Art Instructor in College of Teachers Education (CTE) | 43100-83900 | 06 | - | 06 |
| 20 | Lecturer (Work Experience) College Of Teacher Education (CTE) | 43100-83900 | 06 | - | 06 |
| 21 | Lecturer (Work Experience) District Institute of Education & Training. | 43100-83900 | 20 | - | 20 |
| | TOTAL | | 940 | - | 940 |

Scanned with CamScanner